# ಅಂಗಿ ತೊಟ್ಟೇನೆ ಗೋಪಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 03.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ತೋಡಿ ತಾಳ: ಆದಿ

ಅಂಗಿ ತೊಟ್ಟೇನೆ, ಗೋಪಿ, ಶೃಂಗಾರವಾದೇನೆ
ಹಾಲ ಕುಡಿದೇನೆ, ಗೋಪಿ, ಆಕಳ ಕಾಯ್ದೇನೆ || ಪ ||

ಚಕ್ಕುಲಿ ಕೊಡು ಎನಗೆ, ಗೋಪಿ, ಅಕ್ಕರದಿ ಬಂದೆನೆ
ಗೊಲ್ಲರ ಮಕ್ಕಳ ಎಲ್ಲರೊಡಗೂಡಿ,
ಹಲವು ಗೋವ್ಗಳ ಕಾಯ್ದು ಬಂದೆನೆ || 1 ||

ಅಮ್ಮಣ್ಣಿ ಕೊಡು ಎನಗೆ, ಗೋಪಿ, ಬೆಣ್ಣೆಯ ತೋರೆ ಮೇಲೆ
ಗಮ್ಮನೆ ತಟಕನೆ ಮೊಸರನೆ ಸವಿದು,
ಸುಮ್ಮನೆ ತೊಟ್ಟಿಲೊಳು ಲೋಲಾಡುವೆನು || 2 ||

ಅಪ್ಪಚ್ಚಿ ಕೊಡು ಎನಗೆ, ಗೋಪಿ, ತುಪ್ಪವ ಕೊಡೆ ಮೇಲೆ
ಅಪ್ಪಗೆ ಹೇಳಿ ಟೊಪ್ಪಿಗೆ ಕೊಡಿಸೆ,
ಉಪ್ಪು ಕಡಲೆಯನ್ನು ಚೀಲದಿ ತುಂಬುವೆ || 3 ||

ಚೆಂಡು ಕೊಡು ಎನಗೆ, ಗೋಪಿ, ಚಿನಿಕೋಲು ಬೇಕಲ್ಲ
ಗುಂಡು ಕಲ್ಲಿನಂಥ ಬುತ್ತಿಯ ಕಟ್ಟಿ,
ಹಿಂಡು ಗೋವುಗಳ ಕಾಯ್ದು ಬಂದೆನೆ || 4 ||

ಈ ಲೀಲೆಗಳ ಕೇಳಿ, ಗೋಪಿ, ತೋಳಿನೊಳ್ ಬಿಗಿದಪ್ಪಿ
ಶ್ರೀ ಲೋಲ ಪುರಂದರ ವಿಠಲನ
ಲೀಲೆಯಿಂದಲಿ ಬಾರೆನುತ || 5 ||

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, gopi, halu, govu, golla, benne, tande, ATa, butti,
**Pravachana:** NA
**Explanation:** NA